**ಮಾನ್ಯ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ (ಹಿರಿಯ ಶ್ರೇಣಿ) ಮತ್ತು ಜೆ.ಎಂ. ಎಫ್. ಸಿ ನ್ಯಾಯಾಲಯ ರಾಮನಗರ**

ಅಸಲು ದಾವಾ ಸಂಖ್ಯೆ 500/2025

PW2

| | | |
|---|---|---|
| ವಾದಿ | <> | ಶಿವರುದ್ರಯ್ಯ |
| | ವಿರುದ್ಧ | |
| ಪ್ರತಿವಾದಿಗಳು | <> | ರಾಜಣ್ಣ ಮತ್ತು ಇನ್ನೋಬ್ಬರು |

25/7/26

1 ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀ... ಜೆಎಂಎಫ್‌ಸಿ, ರಾಮನಗರ

## ವಾದಿ ಪರ ಸಾಕ್ಷಿದಾರರ ಮುಖ್ಯ ವಿಚಾರಣಾ ಪ್ರಮಾಣ ಪತ್ರ (PW-2)

| | | |
|---|---|---|
| ಹೆಸರು | : | ಜಿ. ಎನ್ ಶಿವಕುಮಾರ |
| ತಂದೆಯ ಹೆಸರು | : | ಲೇಟ್ ನಂಜಪ್ಪ |
| ವಯಸ್ಸು | : | 52 ವರ್ಷಗಳು |
| ವಾಸ | : | # 115, ಹಳೇ ನಂಬರ್ 95<br>ಗಾಣಕಲ್ಲು ಗ್ರಾಮ<br>ಬಿಡದಿ ಹೋಬಳಿ<br>ರಾಮನಗರ ತಾಲ್ಲೋಕು,<br>ಬೆಂಗಳೂರು ದಕ್ಷಿಣ ಜಿಲ್ಲೆ |

ಬೆಂಗಳೂರು ದಕ್ಷಿಣ ಜಿಲ್ಲೆ, ರಾಮನಗರ ತಾಲ್ಲೋಕು, ಬಿಡದಿ ಹೋಬಳಿ, ಗಾಣಕಲ್ಲು ಗ್ರಾಮದಲ್ಲಿ ವಾಸವಾಗಿರುವ ಲೇಟ್ ನಂಜಪ್ಪ ರವರ ಮಗನಾದ ಸುಮಾರು 52 ವರ್ಷ ವಯಸ್ಸುಳ್ಳ ಜಿ.ಎನ್ ಶಿವಕುಮಾರ ಆದ ನಾನು ಘನ ನ್ಯಾಯಾಲಯದ ಮುಂದೆ ಹಾಜರಾಗಿ ಪ್ರಮಾಣ ಪತ್ರದ ಮೂಲಕ ಸಾಕ್ಷ್ಯವನ್ನು ನುಡಿಯುವುದೇನೆಂದರೆ:-

1. ಸದರಿ ದಾವೆಯನ್ನು ವಾದಿಯು ಪ್ರತಿವಾದಿ ವಿರುದ್ಧ ಹಕ್ಕು ಘೋಷಣೆ, ಹಕ್ಕು ನಿವೃತ್ತಿ ಪತ್ರವನ್ನು ರದ್ದಿಯಾತಿ ಮಾಡುವಂತೆ ಮತ್ತು ಶಾಶ್ವತ ತಡೆಯಾಜ್ಞೆ ಕೋರಿ ಸಲ್ಲಿಸಿರುತ್ತಾರೆ. ಸದರಿ ದಾವೆಯ ಎಲ್ಲಾ ವಿಧ್ಯಾಮಾನಗಳನ್ನು ಬಲ್ಲವನಾಗಿರುತ್ತೇನೆ. ನನಗೆ ಸದರಿ ದಾವೆಯ ವಾದಿ ಹಾಗೂ ಪ್ರತಿವಾದಿಗಳು ಪರಿಚಯವಿರುತ್ತಾರೆ. ಸದರಿ ನಾನು ವಾದಿ ಮತ್ತು ಪ್ರತಿವಾದಿ 1 ರವರು ಗಾಣಕಲ್ಲು ಗ್ರಾಮದ ವಾಸಿಗಳಾಗಿರುತ್ತೇವೆ. ನಾನು ನನ್ನ ಹುಟ್ಟಿನಿಂದ ಗಾಣಕಲ್ಲು ಗ್ರಾಮದಲ್ಲೇ ವಾಸವಾಗಿರುತ್ತೇನೆ. 2ನೇ ಪ್ರತಿವಾದಿಯು ಮಾಗಡಿಯ ಮುತ್ತನದೊಡ್ಡಿಯ ವಾಸಿಯಾಗಿರುತ್ತಾರೆ.

2. ಬೆಂಗಳೂರು ದಕ್ಷಿಣ ಜಿಲ್ಲೆ, ರಾಮನಗರ ತಾಲ್ಲೋಕು, ಬಿಡದಿ ಹೋಬಳಿ, ಗಾಣಕಲ್ಲು ಗ್ರಾಮದ ಸರ್ವೆ ನಂಬರ್ 31/11 ರ ವಿಸ್ತೀರ್ಣ 12 ಗುಂಟೆ ಸ್ವತ್ತನ್ನು ನಾನು ನೋಡಿರುತ್ತೇನೆ. ಸದರಿ ಸ್ವತ್ತು ಮೂಲತಃ ಮಾರ ಬಿನ್ ಮಲ್ಲಯ್ಯರವರಿಗೆ ಸೇರಿದ್ದು ಸದರಿ ಮಾರ ಬಿನ್ ಮಲ್ಲಯ್ಯರವರು ದಿನಾಂಕ 27/12/1962 ರಂದು ರೇವಣ್ಣ ಬಿನ್ ರಾಮಯ್ಯ ಎನ್ನುವವರಿಗೆ ನೊಂದಾಯಿತ ಕ್ರಯಪತ್ರದಂತೆ ಮಾರಾಟ ಮಾಡಿರುತ್ತಾರೆ. ತದನಂತರ ರೇವಣ್ಣ ಬಿನ್ ರಾಮಯ್ಯರವರು ದಿನಾಂಕ

NOTARY LAW-38 LCL 2019 VINOD KUMAR S. B.A.,LL.B.,

ಮಾಡಿರುತ್ತಾರೆ. ಮೇಲ್ಕಂಡ ಎರಡು ಕ್ರಯಪತ್ರ... ಅವರ ಮರಣದವರೆಗೆ ವಯಸ್ಕನಾದ ನಂತರ ಸದರಿ ಮೇಲ್ಕಂಡ ಸ್ವತ್ತಿನಲ್ಲಿ ವಾದಿಯ ತಂದೆ ಅವರ ಮರಣದವರೆಗೆ ಸ್ವಾಧೀನಾನುಭವದಲ್ಲಿದ್ದು ವ್ಯವಸಾಯ ವಗೈರೆ ಮಾಡುತ್ತಿದ್ದು ತದನಂತರ ವಾದಿ ಶಿವರುದ್ರಯ್ಯರವರು ಸದರಿ ಸ್ವತ್ತಿನಲ್ಲಿ ಸ್ವಾಧೀನಾನುಭವದಲ್ಲಿದ್ದು ಅನುಭವಿಸುತ್ತಾ ಬಂದಿರುವುದನ್ನು ನೋಡಿರುತ್ತೇನೆ. ಸದರಿ ಸ್ವತ್ತಿನಲ್ಲಿ ಪ್ರತಿವಾದಿಗಳು ಎಂದೂ ಸಹ ಸ್ವಾಧೀನಾನುಭವದಲ್ಲಿ ಬಂದಿರುವುದಿಲ್ಲ.

3. ನನಗೆ ಬೆಂಗಳೂರು ದಕ್ಷಿಣ ಜಿಲ್ಲೆ, ರಾಮನಗರ ತಾಲ್ಲೂಕು, ಬಿಡದಿ ಹೋಬಳಿ, ಗಾಣಕಲ್ಲು ಗ್ರಾಮದ ಸರ್ವೆ ನಂಬರ್ 3/17 ರಲ್ಲಿ ವಿಸ್ತೀರ್ಣ 1 ಎಕರೆ 08 ಗುಂಟೆ ಸ್ವತ್ತು ಇರುತ್ತದೆ. ಸದರಿ ಸ್ವತ್ತು ದಾವಾ ಸ್ವತ್ತಿನಿಂದ ಐದು ಸರ್ವೆ ನಂಬರ್ ಗಳನ್ನು ಬಿಟ್ಟು ತದನಂತರ ಇರುತ್ತದೆ. ಸದರಿ ಮೇಲ್ಕಂಡ ದಾವಾ ಸ್ವತ್ತಿನಲ್ಲಿ ವಾದಿ ಸ್ವಾಧೀನಾನುಭವದಲ್ಲಿರುವುದನ್ನು ಮತ್ತು ವ್ಯವಸಾಯ ಕಾರ್ಯಗಳನ್ನು ನಿರ್ವಹಿಸುವುದನ್ನು ನಾನು ನೋಡಿರುತ್ತೇನೆ.

4. ನಾನು ನನ್ನ ಪ್ರಮಾಣಪತ್ರದ ಜೊತೆ ನನ್ನ ಸ್ವತ್ತಾದ ಬೆಂಗಳೂರು ದಕ್ಷಿಣ ಜಿಲ್ಲೆ, ರಾಮನಗರ ತಾಲ್ಲೋಕು. ಬಿಡದಿ ಹೋಬಳಿ, ಗಾಣಕಲ್ಲು ಗ್ರಾಮದ ಸರ್ವೆ ನಂಬರ್ 3/17 ರಲ್ಲಿ ವಿಸ್ತೀರ್ಣ 1 ಎಕರೆ 08 ಗುಂಟೆ ಸ್ವತ್ತಿನ ಪಹಣಿ ಪತ್ರಿಕೆಯನ್ನು ಹಾಜರುಪಡಿಸಿರುತ್ತೇನೆ. ನಾನು ನನಗೆ ತಿಳಿದ ವಿಚಾರವನ್ನು ಈ ಪ್ರಮಾಣಪತ್ರದ ಮೂಲಕ ಪ್ರಮಾಣೀಕರಿಸಿ ನುಡಿಯುತಿರುತ್ತೇನೆ.

ಆದುದರಿಂದ ನನ್ನ ಸಾಕ್ಷ್ಯ ಪ್ರಮಾಣ ಪತ್ರವನ್ನು ಪರಿಗಣಿಸಬೇಕೆಂದು ಮಾನ್ಯ ನ್ಯಾಯಾಲಯದಲ್ಲಿ ಕೋರುತ್ತೇನೆ.

ಈ ಮೇಲೆ ತಿಳಿಸಿರುವ ಎಲ್ಲಾ ಅಂಶಗಳು ಸತ್ಯವಾಗಿರುತ್ತದೆ. ನಾನು ಈ ಮೇಲೆ ತಿಳಿಸಿರುವ ಎಲ್ಲಾ ವಿಚಾರಗಳನ್ನು ಕೇಳಿ, ತಿಳಿದುಕೊಂಡು ಸಹಿ ಮಾಡಿರುತ್ತೇನೆ.

ನಾನು ಗುರುತಿಸಿದ್ದೇನೆ:

NOTARY
LAW-38
LCL 2019
VINOD KUMAR.S.
B.A.,LL.B.,
Advocate & Notary
10-2-2022 to
10-2-2027
GOVT. OF KARNATAKA

ವಕೀಲರು

ರಾಮನಗರ

ದಿನಾಂಕ: 25/07/2026

ತಿದ್ದುಪಡಿಗಳ ಸಂಖ್ಯೆ: Nil

ಪ್ರಮಾಣೀಕರಿಸುವವರು

DEPONENT SWORN BEFORE ME

VINOD KUMAR.S. B.A.,LL.B.,
ADVOCATE & NOTARY, KAR/3145/2007
2nd Floor, Mamatha Complex, Near K.S.R.T.C. Bus Stand
RAMANAGARA TOWN - 562 159, Bengaluru South District
Mob : 9739901930

ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಖ್ಯ ವಿಚಾರಣೆ : ವಾದಿ ಪರ ವಕೀಲರಿಂದ:-

ನಾನು ಈಗ ಹಾಜರುಪಡಿಸಿದ ಪ್ರಮಾಣ ಪತ್ರವನ್ನು ನನ್ನ ಮುಖ್ಯ ವಿಚಾರಣೆಯನ್ನಾಗಿ ಪರಿಗಣಿಸಲು ಕೋರುತ್ತೇನೆ. ಪ್ರಮಾಣ ಪತ್ರದಲ್ಲಿನ ಎಲ್ಲಾ ಅಂಶಗಳು ಸತ್ಯವಾಗಿವೆ ಮತ್ತು ಅದರಲ್ಲಿ ನನ್ನ ಸಹಿ ಇರುತ್ತದೆ ಎಂದು ಪ್ರಮಾಣೀಕರಿಸುತ್ತೇನೆ.

ಪಹಣಿಯನ್ನು ನಿಪಿ-22 ಎಂದು ಗುರುತಿಸಲಾಯಿತು.

ಪಾಟೀ ಸವಾಲು ಪ್ರತಿವಾದಿ ಪರ ವಕೀಲರಿಂದ:-

ಪ್ರತಿವಾದಿಗಳು ಏಕಪಕ್ಷೀಯವಾದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆ:- ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ನಿವೇದಿತ ಟಿ.ಎಂ.)
1ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.

10-2-2022 to 10-2-2027 GOVT. OF KARNATA
27/12/1962 ರಂದು ರೇವಣ್ಣ ಬಿನ್ ...
ಕ್ರಯಪತ್ರದಂತೆ ಮಾರಾಟ ಮಾಡಿರುತ್ತಾರೆ. ತದನಂತರ ರೇವಣ್ಣ ಬಿನ್ ರಾಮಯ್ಯರವರು ದಿನಾಂಕ

ಮಾನ್ಯ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ (ಹಿರಿಯ ಶ್ರೇಣಿ) ಮತ್ತು
ಜೆ.ಎಂ. ಎಫ್. ಸಿ ನ್ಯಾಯಾಲಯ ರಾಮನಗರ

ಅಸಲು ದಾವಾ ಸಂಖ್ಯೆ 500/2025

| | | |
|---|---|---|
| ವಾದಿ | <> | ಶಿವರುದ್ರಯ್ಯ |
| | ವಿರುದ್ಧ | |
| ಪ್ರತಿವಾದಿಗಳು | <> | ರಾಜಣ್ಣ ಮತ್ತು ಇನ್ನೊಬ್ಬರು |

PW3

1 ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ರಾಮನಗರ

## ವಾದಿ ಪರ ಸಾಕ್ಷಿದಾರರ ಮುಖ್ಯ ವಿಚಾರಣಾ ಪ್ರಮಾಣ ಪತ್ರ (PW-3)

| | | |
|---|---|---|
| ಹೆಸರು | : | ಜಿ. ಶಿವರಾಜು |
| ತಂದೆಯ ಹೆಸರು | : | ಲೇಟ್ ಐವಾಗಲಯ್ಯ @ ತಮ್ಮಯ್ಯ |
| ವಯಸ್ಸು | : | 56 ವರ್ಷಗಳು |
| ವಾಸ | : | ಗಾಣಕಲ್ಲು ಗ್ರಾಮ<br>ಬಿಡದಿ ಹೋಬಳಿ<br>ರಾಮನಗರ ತಾಲ್ಲೋಕು.<br>ಬೆಂಗಳೂರು ದಕ್ಷಿಣ ಜಿಲ್ಲೆ |

ಬೆಂಗಳೂರು ದಕ್ಷಿಣ ಜಿಲ್ಲೆ, ರಾಮನಗರ ತಾಲ್ಲೋಕು, ಬಿಡದಿ ಹೋಬಳಿ, ಗಾಣಕಲ್ಲು ಗ್ರಾಮದಲ್ಲಿ ವಾಸವಾಗಿರುವ ಲೇಟ್ ಐವಾಗಲಯ್ಯ ರವರ ಮಗನಾದ ಸುಮಾರು 56 ವರ್ಷ ವಯಸ್ಸುಳ್ಳ ಜಿ. ಶಿವರಾಜು ಆದ ನಾನು ಘನ ನ್ಯಾಯಾಲಯದ ಮುಂದೆ ಹಾಜರಾಗಿ ಪ್ರಮಾಣ ಪತ್ರದ ಮೂಲಕ ಸಾಕ್ಷ್ಯವನ್ನು ನುಡಿಯುವುದೇನೆಂದರೆ:-

1. ಸದರಿ ದಾವೆಯನ್ನು ವಾದಿಯು ಪ್ರತಿವಾದಿ ವಿರುದ್ಧ ಹಕ್ಕು ಘೋಷಣೆ ಮತ್ತು ಹಕ್ಕು ನಿವೃತ್ತಿ ಪತ್ರವನ್ನು ರದ್ದಿಯಾತಿ ಮಾಡುವಂತೆ ಮತ್ತು ಶಾಶ್ವತ ತಡೆಯಾಜ್ಞೆ ಕೋರಿ ಸಲ್ಲಿಸಿರುತ್ತಾರೆ. ಸದರಿ ದಾವೆಯ ಎಲ್ಲಾ ವಿಧ್ಯಾಮಾನಗಳನ್ನು ಬಲ್ಲವನಾಗಿರುತ್ತೇನೆ. ನನಗೆ ಸದರಿ ದಾವೆಯ ವಾದಿ ಹಾಗೂ ಪ್ರತಿವಾದಿಗಳು ಪರಿಚಯವಿರುತ್ತಾರೆ. ಸದರಿ ನಾನು ವಾದಿ ಮತ್ತು ಪ್ರತಿವಾದಿ 1 ರವರು ಗಾಣಕಲ್ಲು ಗ್ರಾಮದ ವಾಸಿಗಳಾಗಿರುತ್ತೇವೆ. ನಾನು ನನ್ನ ಹುಟ್ಟಿನಿಂದ ಗಾಣಕಲ್ಲು ಗ್ರಾಮದಲ್ಲೇ ವಾಸವಾಗಿರುತ್ತೇನೆ. 2ನೇ ಪ್ರತಿವಾದಿಯು ಮಾಗಡಿಯ ಮುತ್ತನದೊಡ್ಡಿಯ ವಾಸಿಯಾಗಿರುತ್ತಾರೆ.

2. ಬೆಂಗಳೂರು ದಕ್ಷಿಣ ಜಿಲ್ಲೆ, ರಾಮನಗರ ತಾಲ್ಲೋಕು, ಬಿಡದಿ ಹೋಬಳಿ, ಗಾಣಕಲ್ಲು ಗ್ರಾಮದ ಸರ್ವೆ ನಂಬರ್ 31/11 ರ ವಿಸ್ತೀರ್ಣ 12 ಗುಂಟೆ ಸ್ವತ್ತನ್ನು ನಾನು ನೋಡಿರುತ್ತೇನೆ. ಸದರಿ ಸ್ವತ್ತು ಮೂಲತಃ ಮಾರ ಬಿನ್ ಮಲ್ಲಯ್ಯರವರಿಗೆ ಸೇರಿದ್ದು ಸದರಿ ಮಾರ ಬಿನ್ ಮಲ್ಲಯ್ಯರವರು ದಿನಾಂಕ 27/12/1962 ರಂದು ರೇವಣ್ಣ ಬಿನ್ ರಾಮಯ್ಯ ಎನ್ನುವವರಿಗೆ ನೊಂದಾಯಿತ ಕ್ರಯಪತ್ರದಂತೆ ಮಾರಾಟ ಮಾಡಿರುತ್ತಾರೆ. ತದನಂತರ ರೇವಣ್ಣ ಬಿನ್ ರಾಮಯ್ಯರವರು ದಿನಾಂಕ 16/01/1967 ರಂದು ವಾದಿ ತಂದೆ ಜಿ.ಬಸಪ್ಪರವರಿಗೆ ನೊಂದಾಯಿತ ಕ್ರಯಪತ್ರದಂತೆ ಮಾರಾಟ

NOTARY LAW-38 LCL 2019 VINOD KUMAR.S. B.A., LL.B. Advocate & Notary 10-2-2022 to 10-2-2027 GOVT. OF KARNATAKA

ವಯಸ್ಕನಾದ ನಂತರ ಸದರಿ ಮೇಲ್ಕಂಡ ಸ್ವತ್ತಿನಲ್ಲಿ ವಾದಿಯ ತಂದೆ ಅವರ ಮರಣದವರೆಗೆ ಸ್ವಾಧೀನಾನುಭವದಲ್ಲಿದ್ದು ವ್ಯವಸಾಯ ವಗ್ಯೆರೆ ಮಾಡುತಿದ್ದು ತದನಂತರ ವಾದಿ ಶಿವರುದ್ರಯ್ಯರವರು ಸದರಿ ಸ್ವತ್ತಿನಲ್ಲಿ ಸ್ವಾಧೀನಾನುಭವದಲ್ಲಿದ್ದು ಅನುಭವಿಸುತ್ತಾ ಬಂದಿರುವುದನ್ನು ನೋಡಿರುತ್ತೇನೆ. ಸದರಿ ಸ್ವತ್ತಿನಲ್ಲಿ ಪ್ರತಿವಾದಿಗಳು ಎಂದೂ ಸಹ ಸ್ವಾಧೀನಾನುಭವದಲ್ಲಿ ಬಂದಿರುವುದಿಲ್ಲ.

3. ನನಗೆ ಬೆಂಗಳೂರು ದಕ್ಷಿಣ ಜಿಲ್ಲೆ, ರಾಮನಗರ ತಾಲ್ಲೋಕು, ಬಿಡದಿ ಹೋಬಳಿ, ಗಾಣಕಲ್ಲು ಗ್ರಾಮದ ಸರ್ವೆ ನಂಬರ್ 24/11 ರಲ್ಲಿ ವಿಸ್ತೀರ್ಣ 1 ಎಕರೆ 21 ಗುಂಟೆ ಸ್ವತ್ತು ನನ್ನ ಅಣ್ಣ ರೇವಣ್ಣ ಸಿದ್ದಯ್ಯ ಮತ್ತು ನನ್ನ ಹೆಸರಿನಲ್ಲಿ ಜಂಟಿ ಇರುತ್ತದೆ. ಸದರಿ ಸ್ವತ್ತು ದಾವಾ ಸ್ವತ್ತಿನ ಪಕ್ಕದಲ್ಲಿ ಮಂಚಮ್ಮರವರ ಸ್ವತ್ತು ಇದ್ದು ಮಂಚಮ್ಮರವರ ಸ್ವತ್ತಿನ ನಂತರ ನನ್ನ ಸ್ವತ್ತಾದ ಸರ್ವೆ ನಂಬರ್ 24/11 ರ ಸ್ವತ್ತು ಇರುತ್ತದೆ. ಸದರಿ ಮೇಲ್ಕಂಡ ದಾವಾ ಸ್ವತ್ತಿನಲ್ಲಿ ವಾದಿ ಸ್ವಾಧೀನಾನುಭವದಲ್ಲಿರುವುದನ್ನು ಮತ್ತು ವ್ಯವಸಾಯ ಕಾರ್ಯಗಳನ್ನು ನಿರ್ವಹಿಸುವುದನ್ನು ನಾನು ನೋಡಿರುತ್ತೇನೆ.

4. ನಾನು ನನ್ನ ಪ್ರಮಾಣಪತ್ರದ ಜೊತೆ ನನ್ನ ಸ್ವತ್ತಾದ ಬೆಂಗಳೂರು ದಕ್ಷಿಣ ಜಿಲ್ಲೆ, ರಾಮನಗರ ತಾಲ್ಲೋಕು, ಬಿಡದಿ ಹೋಬಳಿ, ಗಾಣಕಲ್ಲು ಗ್ರಾಮದ ಸರ್ವೆ ನಂಬರ್ 3/17 ರಲ್ಲಿ ವಿಸ್ತೀರ್ಣ 1 ಎಕರೆ 08 ಗುಂಟೆ ಸ್ವತ್ತಿನ ಪಹಣಿ ಪತ್ರಿಕೆಯನ್ನು ಹಾಜರುಪಡಿಸಿರುತ್ತೇನೆ. ನಾನು ನನಗೆ ತಿಳಿದ ವಿಚಾರವನ್ನು ಈ ಪ್ರಮಾಣಪತ್ರದ ಮೂಲಕ ಪ್ರಮಾಣೀಕರಿಸಿ ನುಡಿಯುತಿರುತ್ತೇನೆ.

ಆದುದರಿಂದ ನನ್ನ ಸಾಕ್ಷ್ಯ ಪ್ರಮಾಣ ಪತ್ರವನ್ನು ಪರಿಗಣಿಸಬೇಕೆಂದು ಮಾನ್ಯ ನ್ಯಾಯಾಲಯದಲ್ಲಿ ಕೋರುತ್ತೇನೆ.

ಈ ಮೇಲೆ ತಿಳಿಸಿರುವ ಎಲ್ಲಾ ಅಂಶಗಳು ಸತ್ಯವಾಗಿರುತ್ತದೆ. ನಾನು ಈ ಮೇಲೆ ತಿಳಿಸಿರುವ ಎಲ್ಲಾ ವಿಚಾರಗಳನ್ನು ಕೇಳಿ, ತಿಳಿದುಕೊಂಡು ಸಹಿ ಮಾಡಿರುತ್ತೇನೆ.

ನಾನು ಗುರುತಿಸಿದ್ದೇನೆ:

ವಕೀಲರು

ರಾಮನಗರ

ದಿನಾಂಕ: 25/07/2026

ತಿದ್ದುಪಡಿಗಳ ಸಂಖ್ಯೆ: Nil

NOTARY
LAW-38
LCL 2019
VINOD KUMAR.S.
B.A.,LL.B.,
Advocate & Notary
10-2-2022 to
10-2-2027
GOVT. OF KARNATAKA

To. Shivaraju,

ಪ್ರಮಾಣೀಕರಿಸುವವರು

DEPONENT SWORN BEFORE ME

VINOD KUMAR.S. B.A.,LL.B.,
ADVOCATE & NOTARY, KAR/3145/2007
2nd Floor, Mamatha Complex, Near K.S.R.T.C. Bus Stand
RAMANAGARA TOWN - 562 159, Bengaluru South District
Mob : 9739901930

ದಿನಾಂಕ: 25.07.2026

ಪಿ.ಡಬ್ಲ್ಯೂ -3 ( ಜಿ ಶಿವರಾಜು )

ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಖ್ಯ ವಿಚಾರಣೆ : ವಾದಿ ಪರ ವಕೀಲರಿಂದಃ-

ನಾನು ಈಗ ಹಾಜರುಪಡಿಸಿದ ಪ್ರಮಾಣ ಪತ್ರವನ್ನು ನನ್ನ ಮುಖ್ಯ ವಿಚಾರಣೆಯನ್ನಾಗಿ ಪರಿಗಣಿಸಲು ಕೋರುತ್ತೇನೆ. ಪ್ರಮಾಣ ಪತ್ರದಲ್ಲಿನ ಎಲ್ಲಾ ಅಂಶಗಳು ಸತ್ಯವಾಗಿವೆ ಮತ್ತು ಅದರಲ್ಲಿ ನನ್ನ ಸಹಿ ಇರುತ್ತದೆ ಎಂದು ಪ್ರಮಾಣೀಕರಿಸುತ್ತೇನೆ.

ಪಹಣಿಯನ್ನು ನಿಪಿ-23 ಎಂದು ಗುರುತಿಸಲಾಯಿತು.

ಪಾಟೀ ಸವಾಲು ಪ್ರತಿವಾದಿ ಪರ ವಕೀಲರಿಂದಃ-

ಪ್ರತಿವಾದಿಗಳು ಏಕಪಕ್ಷೀಯವಾದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆ:- ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

25/7

(ನಿವೇದಿತ ಟಿ.ಎಂ.)
1ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.

G. Shivaraju

Ramaiah through a registered Sale Deed dated 27/12/1962.